ತೀರಕ್ಕೆ ಎರಡು ಕಿಲೋ ಮೀಟರು ದೂರವಿದೆ ಎನ್ನುವಾಗ ಆತ ಒಂದು ಕಪ್ಪನೆಯ ವಸ್ತುವನ್ನು ಕಂಡ. ಅದು ತಾಳೆ ಕಾಯಿಯಷ್ಟು ಇದ್ದು ನೀರ ಮೇಲೆ ತೇಲುತ್ತಿದೆ. ಅದು ಯಾವ ಆಮೆಯೋ, ಇಲ್ಲ ಹೊಸ ಬಗೆಯ ಮೀನೋ ಎಂದು ಅಂದುಕೊಳ್ಳುತ್ತಾ ದೋಣಿಯನ್ನು ಆ ಕಡೆಗೆ ತಿರುಗಿಸಿದ. ಹತ್ತಿರದಿಂದ ನೋಡಿ ಹೆದರಿಬಿಟ್ಟ. ಅದೊಂದು ಮನುಷ್ಯನ ತಲೆ. ಬಿಳಿ ಹಾಗೂ ಕರಿಯ ಬಣ್ಣಗಳು ಕಲೆತು ಅಂಟಂಟಾಗಿದೆ. ಗಡ್ಡ ಮೊಳದಷ್ಟು ಉದ್ದ ಬೆಳೆದು, ಮೀಸೆಗಳೊಂದಿಗೆ ಬೆರೆತು ಹೋಗಿದೆ. ಹಣೆ ಮಾತ್ರ ಸ್ಪಷ್ಟವಾಗಿ ಕಾಣುತ್ತಿದೆ.

ಆತನ ಎರಡೂ ಕೈಗಳ ಕೆಳಗೆ ಒಂದು ಮರದ ತುಂಡು ನೀರಿನ ಮಟ್ಟದಲ್ಲಿ ತೇಲುತ್ತಿದೆ. ಅಲೆಗಳ ಅಲೆದಾಟದಲ್ಲಿ ಅದು ಒಮ್ಮೆ ಕಾಣಿಸುತ್ತಾ ಮತ್ತೊಮ್ಮೆ ನೀರಿನಲ್ಲಿ ಮುಳುಗಿ ಮಾಯವಾಗುತ್ತಿದೆ. ಆದ್ದರಿಂದ ಆತನ ತಲೆ ಮಾತ್ರ ಮೇಲೆ ಕಾಣಿಸುತ್ತಿದೆ. ಆತ ಕಣ್ಣು ತೆರೆದುಕೊಂಡು ಭೀಕರವಾಗಿ ಕಾಣಿಸುತ್ತಿದ್ದಾನೆ. ಆದರೆ ಆತನಲ್ಲಿ ಚಲನೆ ಇಲ್ಲ. ರೆಪ್ಪೆ ಆಡಿಸುತ್ತಿಲ್ಲ. ಕುಮಾರಪ್ಪನಿಗೆ ಅರ್ಥವಾಯಿತು ಆತ ಕಡಲುಗಳ್ಳ ಎಂದು. ಯಾವುದೋ ಅವಘಡಕ್ಕೆ ಸಿಲುಕಿ ಸತ್ತಿರುತ್ತಾನೆ ಎಂದು.

ಆತನ ಹಿರಿಯರು ಹೇಳುತ್ತಿದ್ದರು, ಕಡಲುಗಳ್ಳರು ತೆಪ್ಪಗಳಲ್ಲಿ ಗುಂಪು ಗುಂಪಾಗಿ ಬಂದು ಮೀನುಗಾರರನ್ನು ಹೆದರಿಸಿ ಅವರೆಗೆ ಹಿಡಿದಿದ್ದ ಮೀನುಗಳನ್ನು ಅಲಾಯಿದ ಕಿತ್ತುಕೊಳ್ಳುತ್ತಾರೆಂದು, ತುಂಬಾ ಕ್ರೂರವಾಗಿರುತ್ತಾರೆಂದು, ಪ್ರತಿಭಟಿಸಿದರೆ ಕತ್ತಿಯಿಂದ ತಿವಿದು ಸಮುದ್ರದ ಮೀನುಗಳಿಗೆ ಆಹಾರವಾಗಿ ಎಸೆಯುತ್ತಾರೆಂದು. ಪಳಗಿದ ದೊಡ್ಡ ದೊಡ್ಡ ಕಳ್ಳರ ಗುಂಪಾದರೆ ದೋಣಿಗಳನ್ನು ಕಡಲ ನಡುವೆ ತಡೆದು, ಬಂದೂಕುಗಳಿಂದ ದಾಳಿ ಮಾಡಿ ಅವರಲ್ಲಿನ ಸಂಪತ್ತನ್ನು ದೋಚುತ್ತಾರೆಂದು.

ಮತ್ತೊಂದು ಸಂಗತಿ ಏನೆಂದರೆ, ಅವರ ದಕ್ಷಿಣ ದಿಕ್ಕಿನಲ್ಲಿರುವ ತಮಿಳು ಜಾಲರಿಗಳು, ಉತ್ತರ ದಿಕ್ಕಿನಲ್ಲಿರುವ ಒಡಿಸ್ಸಾ ಜಾಲರಿಗಳು ನಮ್ಮ ಸಮುದ್ರದ ವಲಯದಲ್ಲಿ ಮೀನು ಹಿಡಿದಿದ್ದೀರಿ ಎಂದು ಕೆಲವರು ಆಯಾ ರಾಜ್ಯದ ಮೂರ್ಖ ಮೀನುಗಾರರು ಇವರು ಹಿಡಿದಿದ್ದ ಮೀನನ್ನು ಬೆದರಿಸಿ ಒಯ್ಯುವುದು ಆಗಾಗ ನಡೆಯುತ್ತಿರುತ್ತದೆ, ಅವರನ್ನೇ ಕಡಲುಗಳ್ಳರೆಂದು ಇವರು ಭಾವಿಸುತ್ತಿರುತ್ತಾರೆ.

ಅಸಲು ಕಡಲುಗಳ್ಳರೆಂದರೆ ಕಡಲ ನಡುವಿನ ರಹಸ್ಯ ದ್ವೀಪಗಳಲ್ಲಿ ವಾಸಿಸುತ್ತ, ಇತರ ದೇಶಗಳಲ್ಲಿ ವ್ಯಾಪಾರ ಮಾಡಿ ಸಂಪತ್ತಿನೊಂದಿಗೆ ದೋಣಿಯಲ್ಲಿ ಬರುತ್ತಿರುವ ವ್ಯಾಪಾರಿಗಳ ಮೇಲೆ ತಮ್ಮ ಅನುಚರರೊಂದಿಗೆ ದಾಳಿ ಮಾಡಿ ಎಲ್ಲವನ್ನೂ ಕಸಿದು ಒಯ್ಯುತ್ತಾರೆ.

ಆದರೆ, ತನಗೆ ಬುದ್ಧಿ ಬಂದಮೇಲೆ ಯಾವಾಗಲೂ ಇಂತಹ ಘಟನೆ ನಡೆಯಲಿಲ್ಲ. ತಾನೆಂದೂ ಕಡಲುಗಳ್ಳರನ್ನು ನೋಡಲಾಗಲೇ ಇಲ್ಲ. ಈಗ ನೋಡುತ್ತಿದ್ದೇನೆ. ತಾನು ಇವನನ್ನು ತೀರಕ್ಕೆ ಎಳೆದು ಕಾಪಾಡಬೇಕೇ? ಬೇಡವೇ? ಎಂದು ಕ್ಷಣ ಹೊತ್ತು ಯೋಚಿಸಿದ. ತಾನು ರಕ್ಷಿಸಿದರೂ, ರಕ್ಷಿಸದಿದ್ದರೂ ಇವನು ಬೆಳಗಾಗುವ ವೇಳೆಗೆ ತೀರಕ್ಕೆ ತೇಲಿ ಬರುವುದು ಖಚಿತ. ಎಷ್ಟೇ ಆಗಲಿ ತಾನು ಒಬ್ಬ ಮನುಷ್ಯ. ಕುಮಾರಪ್ಪನಲ್ಲಿ ಮಾನವತ್ವ ಎಚ್ಚರವಾಯಿತು. ನಿಧಾನವಾಗಿ ದೋಣಿಯ ಹಗ್ಗಗಳನ್ನು ಮರದ ತುಂಡಿಗೆ ಕಟ್ಟಿ ದೋಣಿಯನ್ನು ದಡಕ್ಕೆ ಮುಟ್ಟಿಸಿದ.

ದೋಣಿ ಮೊಣಕಾಲಿನಾಳಕ್ಕೆ ಬಂದಮೇಲೆ ಒಂದು ದೊಡ್ಡ ಅಲೆಗಾಗಿ ಕಾದಿದ್ದು ಅದು ಬಂದ ಕೂಡಲೇ ಅದರ ಹಿಂದೆ ತೆಪ್ಪವನ್ನು ಬಲವಾಗಿ ತಳ್ಳಿದ. ಆ ಅಲೆ ತೆಪ್ಪವನ್ನು ಬೀಸಾಗಿ ದಡದಲ್ಲಿನ ಮರಳಿನಲ್ಲಿ ನೆಟ್ಟು ತಾನು ಕಡಲಿನೊಳಕ್ಕೆ ಹೊರಟು ಹೋಯಿತು. ಆ ಅಲೆಯ ಬೀಸಿಗೆ ತೆಪ್ಪ ದಡದ ಮೇಲಿನ ಮರಳಿನಲ್ಲಿ ದೂರ ಬಂದುಬಿಟ್ಟಿತು. ಅದರೊಂದಿಗೆ ಮರದ ತುಂಡಿನ ಜೊತೆ ತೇಲಿ ಬಂದ ಕಡಲುಗಳ್ಳನ ಶರೀರವನ್ನು ನೋಡಿ ಕುಮಾರಪ್ಪ ತೃಪ್ತಿಪಟ್ಟ. ಆತನ ತಲೆಯ ಹೊರತಾಗಿ ಉಳಿದ ಮೈಯನ್ನು ಮೀನುಗಳು ಕಚ್ಚಿ ತಿಂದು ಹಾಕಿರುತ್ತವೆ ಎಂದು ಭಾವಿಸಿದ್ದ ಆತನಿಗೆ ಆ ಕಡಲುಗಳ್ಳ ಪೂರ್ತಿ ಶರೀರದೊಂದಿಗೆ

